# ಐರಾಣಿ ಕೊಡು ಕುಂಬಾರಣ್ಣ...



ಉತ್ತರ ಕರ್ನಾಟಕದಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿ ಉಳಿದ ಸಮುದಾಯ ಮದುವೆಗಾಗಿ ಕುಂಬಾರರ ಮನೆಯಿಂದ ಐರಾಣಿಯನ್ನು ಒಯ್ಯುವುದು ಪದ್ಧತಿ. ಉಳ್ಳವರು ಪಂಚಕಳಸವನ್ನು ಸ್ಥಾಪಿಸುತ್ತಾರೆ. ಆದರೆ ಮೂಲತಃ ಮದುವೆಗೆ ಬೇಕಾದದ್ದು ಕುಂಬಾರರ ಮನೆಯ ಹೊಸ ಐರಾಣಿ ಗಡಿಗೆಗಳು. ಊರ ದೇವರ ಉತ್ಸವಕ್ಕೂ ಐರಾಣಿಯನ್ನು ಒಯ್ಯುವುದು ವಾಡಿಕೆ. ಇದನ್ನು ಕೆಲವು ಪ್ರದೇಶಗಳಲ್ಲಿ 'ಕೇಲು' ಎಂದೂ ಕರೆಯುತ್ತಾರೆ.

ಕುಂಬಾರನ ಮನೆಗೆ ಐರಾಣಿ ಬೇಕಾದವರು ಮದುವೆಯ ಹಿಂದಿನ ದಿನ ಬಂದು ಹೇಳಿ ಹೋಗುತ್ತಾರೆ. ಆಗ ಕುಂಬಾರ ಐರಾಣಿಗೆ ಬೇಕಾದ ಮಡಿಕೆ, ಕುಡಿಕೆ, ಮಣ್ಣಿನ ಮುಚ್ಚಳಗಳಿಗೆ ಸುಣ್ಣವನ್ನು ಹಚ್ಚಿ ಅದರ ಮೇಲೆ ಸುಮಂಗಲೆಯರು, ಸೂರ್ಯ–ಚಂದ್ರರ ಚಿತ್ರಗಳನ್ನು ನೀರ ಬಣ್ಣದಿಂದ ಬರೆಯುತ್ತಾರೆ. ಐರಾಣಿ ಒಯ್ಯಲು ಮುತ್ತೈದೆಯರು ಮಂಗಳವಾದ್ಯಗಳೊಂದಿಗೆ ಬರುತ್ತಾನೆ. ಕುಂಬಾರ ಕಂಬಳಿಯನ್ನು ಹಾಸಿ, ಅದರ ಮೇಲೆ ಐರಾಣಿ ಗಡಿಗೆಳನ್ನಿಟ್ಟು, ಉಲುಪಿ ರೂಪದಲ್ಲಿ ಅಕ್ಕಿ, ಬೇಳೆ, ಬೆಲ್ಲ, ಎಲೆ, ಅಡಿಕೆ, ಹಣವನ್ನು ಇಟ್ಟು, ತೆಂಗಿನ ಕಾಯಿ ಒಡೆದು ಪೂಜೆ ಮಾಡುತ್ತಾರೆ. ಮುತ್ತೈದೆಯರು ಐರಾಣಿಗಳ ಮೇಲೆ ಬಿಳಿ ಬಟ್ಟೆಯನ್ನು ಹೊದಿಸಿಕೊಂಡು ಹಾಡನ್ನು ಹೇಳುತ್ತಾ ಹೋಗುತ್ತಾರೆ.

ಐರಾಣಿ ಒಯ್ಯೋದಕ ತುಪ್ಪದ ಗಿಂಡಿ ತಂದೇವಿ  
ತುಪ್ಪಾ ಉಂಡು ಐರಾಣಿ ಕೊಡು ಅಣ್ಣಾ  
ಐರಾಣಿ ಒಯ್ಯುದಕ್ಕ ನಾವೆಲ್ಲಾ ಬಂದೇವಿ  
ಐರಾಣಿ ಆಹೇರು ತಂದೇವಿ  
ಐರಾಣಿ ಆಹೇರ ತಂದೇವಿ ಕುಂಬಾರಣ್ಣ...

ಏಳು ಮಡಿಕೆ, ಎರಡು ಕುಡಿಕೆ, ಐದು ಬಿಂದಿಗೆಗಳು, ಮಣ್ಣಿನ ಮುಚ್ಚಳಗಳು ಇರುತ್ತವೆ. ಏಳು ಮಡಿಕೆಗಳಲ್ಲಿ ನೀರನ್ನು ಹಾಕುತ್ತಾರೆ. ಇವು ಏಳು ಸಮುದ್ರದ ನೀರೆಂದು ಭಾವಿಸುತ್ತಾರೆ. ಮದುವೆ ಸಂದರ್ಭದಲ್ಲಿ ಐದು ಕುಡಿಕೆಗಳಿಗೆ (ಪಂಚ ಕಳಸದಂತೆ) ಸೂತ್ರವನ್ನು ಕಟ್ಟಿ ಮದುವೆಯನ್ನು ನೆರವೇರಿಸುತ್ತಾರೆ. ಮದುವೆ ಮುಗಿದ ನಂತರ ಐವರು ಸುಮಂಗಲೆಯರಿಗೆ ಅವುಗಳನ್ನು ಕೊಟ್ಟು ಕಳಿಸುತ್ತಾರೆ. ಉಳಿದವುಗಳನ್ನು



ಮದುವೆ ಮನೆಯವರು ನಿತ್ಯೋಪಯೋಗಕ್ಕೆ ಬಳಸಿಕೊಳ್ಳುತ್ತಾರೆ.

ಮದುವೆ ಮಂಗಳ ಕಾರ್ಯಕ್ಕೆ ಮಡಿಕೆ ಮಾಡಲು ಕುಂಬಾರಣ್ಣ ಹಾಲು, ಬಾನ ಉಂಡು ಮಂಜಾನೆ ಸಮಯದಲ್ಲಿ ಕೆಲಸಕ್ಕೆ ತೊಡಗುವ ರೀತಿಯನ್ನು ತುಂಬಾ ಸೊಗಸಾಗಿ ಐರಾಣಿ ಒಯ್ಯಲು ಬಂದವರು ಹಾಡುತ್ತಾರೆ. ಕುಂಬಾರನ ಮನೆಯಿಂದ ಐರಾಣಿ ತರುವ ಹಾಡುಗಳು ವಿವಿಧ ಜನಾಂಗಗಳಲ್ಲಿ ಬೇರೆ ಬೇರೆಯಾಗಿದ್ದರೂ ಅವುಗಳ ಆಶಯ ಒಂದೇ.

ಗ್ರಾಮಗಳಲ್ಲಿ ನಡೆಯುವ ಗ್ರಾಮದೇವತೆ ಉತ್ಸವಗಳಲ್ಲಿ ಕುಂಬಾರರ ಐರಾಣಿ ಬೇಕೇಬೇಕು. ಆಗ ಆರತಿಯನ್ನು ಹಿಡಿದ ಮಹಿಳೆಯರು–

ಕುಂಬಾರ ಮನಿಯಾಗ ಜಂಬಾರವೇನಮ್ಮ  
ರಂಬೀಗೆ ಅರುಣಿ ಕೊಡಬೇಕು ದ್ಯಾಮವ್ವ  
ಕಂಕಣವೇ ಬ್ಯಾಗ ಹೊದಿಸಾವೆ.  
ಕುಂಬಾರನ ಮನಿಯಾಗ ಜಂಬಾರವೇನಮ್ಮ  
ನಿಂಬೀಗಿ ಹರಿನೀರ ತಿರುವ್ಯಾನೇ ಗುಂಡಣ್ಣನ  
ರಂಬಿ ಬಂದು ಅರುಣಿ ಕೊಡುಬಾರೆ

ಎಂದು ಹಾಡುತ್ತಾ ಐರಾಣಿಯನ್ನು ಒಯ್ಯುವ ಸೊಬಗು ಆಕರ್ಷಕವಾಗಿರುತ್ತದೆ. ಇದು ಉತ್ತರ ಕರ್ನಾಟಕದಲ್ಲಿನ ವಿಶೇಷ ಆಚರಣೆಯಾಗಿದೆ. ಆದರೆ ಜಾಗತೀಕರಣದಿಂದ ಜನಪದ ಆಚರಣೆಗಳು ಅವನತಿಯ ಹಾದಿ ಹಿಡಿದು ಐರಾಣಿ ಪರಂಪರೆಯು ಜನಮಾನಸದಿಂದ ಈಗ ಕಣ್ಮರೆಯಾಗುತ್ತಿದೆ.

■ ಡಾ. ಮಲ್ಲಿಕಾರ್ಜುನ ಕುಂಬಾರ

